ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ,
ಮಡಿಕೇರಿ.

**ಸಿ.ಸಿ.ನಂಃ 2873/25**

ಪಿಡಬ್ಲ್ಯುಃ – 1

ಸಿಡಬ್ಲ್ಯುಃ – 1

ದಿನಾಂಕಃ 15.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | – ಹರೀಶ |
| ತಂದೆಯ ಹೆಸರು | – ರಾಜು |
| ವಯಸ್ಸು | – 38 ವರ್ಷ |
| ವೃತ್ತಿ | – ಚಾಲಕ |
| ವಾಸಸ್ಥಳ | – ಜಂಬೂರು, ಮಾದಾಪುರ |

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ-

ಚಾಸಾ-2 ರಿಂದ 6 ನನಗೆ ಗೊತ್ತು. ಆರೋಪಿತರು ನನಗೆ ಗೊತ್ತು. ಆರೋಪಿತರು ಮತ್ತು ನನ್ನ ನಡುವೆ ಸಣ್ಣ ಪುಟ್ಟ ವಿಚಾರವಾಗಿ ಮಾತುಕತೆ ಆಗಿದ್ದು, ಅದನ್ನು ಬಗೆಹರಿಸಿಕೊಳ್ಳಲು ನಾವು ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ಎರಡು ದಾಖಲೆಗಳಿಗೆ ನನ್ನ ಸಹಿ ಪಡೆದಿರುತ್ತಾರೆ. ಇದರ ಹೊರತಾಗಿ ಆರೋಪಿ ನಮಗೆ ಅವಾಚ್ಯ ಶಬ್ಧಗಳಿಂದ ಬೈದಿಲ್ಲ, ಜೀವ ಬೆದರಿಕೆ ಹಾಕಿಲ್ಲ, ನಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ ಆಗಿಲ್ಲ, ಆರೋಪಿತರು ನನ್ನ ಇನೋವಾ ಕಾರು ಕೆಎ-41 ಎ-4659 ಗೆ ಯಾವುದೇ ರೀತಿ ನಷ್ಟ ಉಂಟು ಮಾಡಿಲ್ಲ. ಆರೋಪಿತರು ಚಾಸಾ-2 ರವರ ವಾಹನ ಕಾರು ಕೆಎ-02 ಎಡಿ-4971 ಗೂ ಕೂಡ ಯಾವುದೇ ರೀತಿ ನಷ್ಟ ಉಂಟು ಮಾಡಿಲ್ಲ. ನಾನು ಆರೋಪಿತರ ವಿರುದ್ಧ ಪೊಲೀಸರಿಗೆ ಯಾವುದೇ ದೂರು ನೀಡಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರು ಮಾಡಿಲ್ಲ ಹಾಗೂ ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ದೂರಾಗಿದ್ದು , ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ

ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ಸ್ಥಳ ಮಹಜರಾಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಿಪಿ-1 ಮತ್ತು 2 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

ಪಾಟೀ ಸವಾಲು ಮಾನ್ಯ ಸರಕಾರಿ ಅಭಿಯೋಜಕರಿಂದಃ-

ದಿಃ 03.06.2025 ರಂದು ಮೇಕೇರಿಯ ವೈಲ್ಡರ್ ನೆಸ್ ರೆಸಾರ್ಟಿಗೆ ಮುಂಬೈ ಮೂಲದ ಪ್ರವಾಸಿಗರು ಬಂದಿದ್ದು, ಅವರನ್ನು ವಿಮಾನ ನಿಲ್ದಾಣಕ್ಕೆ ಬಿಟ್ಟು ನಾನು ವಾಪಾಸ್ಸು ರೆಸಾರ್ಟಿಗೆ ಬರುತ್ತಿದ್ದಾಗ, ಮೇಕೇರಿಯ ನಮ್ಮ ರೆಸಾರ್ಟಿನ ಹತ್ತಿರ ಆರೋಪಿತರು ಅವರ ದ್ವಿ ಚಕ್ರ ವಾಹನ ಸಂಖ್ಯೆ ಕೆಎ-12 ವೈ- 7404 ಡಿಯೋ ಬೈಕಿನಲ್ಲಿ ನನ್ನ ಹಾಗೂ ಚಾಸಾ-2 ರವರ ಕಾರುಗಳನ್ನು ಓವರ್ ಟೇಕ್ ಮಾಡಿಕೊಂಡು ಬಂದು ಅಡ್ಡಗಟ್ಟಿ ನಮ್ಮನ್ನು ಅವಾಚ್ಯ ಶಬ್ಧಗಳಿಂದ ಬೈದು, ಚಾಸಾ-2 ರವರು ಚಲಾಯಿಸುತ್ತಿದ್ದ ಕಾರು ಸಂಖ್ಯೆ ಕೆಎ-02 ಎಡಿ-4971 ಗಾಡಿಯ ಬಾಗಿಲುಗಳಿಗೆ ಆರೋಪಿತರು ಕಾಲಿನಿಂದ ಒದ್ದು, ನಿಂದಿಸಿ ಯಾರಿಗೋ ಕರೆ ಮಾಡಿ ಬೆಂಗಳೂರಿನ ಎರಡು ಕಾರುಗಳು ಸಿಕ್ಕಿವೆ ಬೆಂಕಿ ಹಾಕಿ ಸುಡುವ ಎಂದು ಹೇಳಿ ನಮಗೆ ಜೀವಬೆದರಿಕೆ ಹಾಕಿದ್ದು ಕೂಡಲೇ ಚಾಸಾ-2 ರವರು 112 ಗೆ ಕರೆ ಮಾಡಿ ಪೊಲೀಸರನ್ನು ಕರೆಸಿರುತ್ತಾರೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಆರೋಪಿತರು ಮದ್ಯಪಾನ ಮಾಡಿದ್ದರು ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳನ್ನು ಒಳಗೊಂಡದತೆ ನಾನು ಆರೋಪಿತರ ವಿರುದ್ಧ ದಿಃ 03.06.2025 ರಂದು ನಿಪಿ-1 ರಂತೆ ದೂರು ನೀಡಿದ್ದೇನೆ ಎಂದರೆ ಸರಿಯಲ್ಲ.

ದಿಃ 09.06.2025ರಂದು ನಾನು ಕೃತ್ಯ ಸ್ಥಳವನ್ನು ಪೊಲೀಸರಿಗೆ ತೋರಿಸಿದ ಮೇರೆಗೆ, ಪೊಲೀಸರು ಚಾಸಾ-5 ಮತ್ತು 6 ಹಾಗೂ ನನ್ನ ಸಮಕ್ಷಮ ನಿಪಿ-2 ರಂತೆ ಸ್ಥಳ ಮಹಜರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾನು ನಿಪಿ-2 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ಮತ್ತು 2ರ ವಿಚಾರ ಗೊತ್ತಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿತರು ರಾಜಿ

ಮಾಡಿಕೊಂಡಿರುತ್ತೇವೆ ಎಂದರೆ ಸರಿ. ರಾಜಿ ಮಾಡಿಕೊಂಡಿರುವ ಕಾರಣ ಆರೋಪಿತರ ಪರ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

ಪಾಟೀ ಸವಾಲುಃ – ಆರೋಪಿತರ ಪರ ವಕೀಲರಿಂದ ಏನು ಇಲ್ಲ.

ಮರು ವಿಚಾರಣೆಃ – ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/–

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ. ಎಂ. ಎಫ್. ಸಿ, ಮಡಿಕೇರಿ.